Reg. No. : ....................................

Name : .......................................

**Code No. 9041**

**Second Year – March 2018**

Time : 2 ½ Hours
Cool-off time : 15 Minutes

Part – III

## KANNADA (Optional)

Maximum : 80 Scores

***General Instructions to Candidates :***

- There is a 'Cool-off time' of 15 minutes in addition to the writing time.
- Use the 'Cool-off time' to get familiar with questions and to plan your answers.
- Read questions carefully before answering.
- Read the instructions carefully.
- Calculations, figures and graphs should be shown in the answer sheet itself.
- Give equations wherever necessary.
- Electronic devices except non-programmable calculators are not allowed in the Examination Hall.

ವಿದ್ಯಾರ್ಥಿಗಳಿಗೆ ಸೂಚನೆಗಳು :

- ಪರೀಕ್ಷೆ ಬರೆಯಲು ಬೇಕಾದ ಸಮಯಕ್ಕೆ ಹೊರತಾಗಿ **15** ನಿಮಿಷಗಳ 'ಕೂಲ್ ಆಫ್ ಸಮಯ' ವನ್ನು ಕೊಡಲಾಗಿದೆ.
- 'ಕೂಲ್ ಆಫ್ ಸಮಯ' ವನ್ನು ಪ್ರಶ್ನೆಗಳಿಗೆ ಸಂಬಂಧಿಸಿದ ನಿಮ್ಮ ಉತ್ತರಗಳ ಯೋಜನೆಗೆ ಬಳಸಿ.
- ಉತ್ತರಗಳನ್ನು ಬರೆಯುವುದಕ್ಕೆ ಮುಂಚಿತವಾಗಿ ಪ್ರಶ್ನೆಗಳನ್ನು ಗಮನವಿಟ್ಟು ಓದಿರಿ.
- ಸೂಚನೆಗಳನ್ನು ಗಮನವಿಟ್ಟು ಓದಿರಿ.
- ಎಣಿಕೆ/ಲೆಕ್ಕಾಚಾರಗಳನ್ನು , ಚಿತ್ರಗಳನ್ನು ಮತ್ತು ರೇಖಾನಕ್ಷೆಗಳನ್ನು ಉತ್ತರಪತ್ರಿಕೆಯಲ್ಲಿಯೇ ಬರೆಯಬೇಕು.
- ಅಗತ್ಯವಿರುವಲ್ಲಿ ಸಮೀಕರಣಗಳನ್ನು ಬರೆಯಿರಿ.
- 'ನಾನ್ ಪ್ರೋಗ್ರಾಮೇಬಲ್ ಕ್ಯಾಲ್ಕುಲೇಟರ್' ಗಳ ಹೊರತು ಬೇರೆ ಯಾವುದೇ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಕೊಠಡಿಯೊಳಗೆ ತರಬಾರದು.

(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ) **(4 × 1 = 4)**

1. ಕನ್ನಡದ ಆದಿಕವಿ ಯಾರು ?
   (ರನ್ನ, ಜನ್ನ, ಪೊನ್ನ, ಪಂಪ) **(Score : 1)**

2. ರಗಳೆಯ ಕವಿ ಎಂದು ಪ್ರಸಿದ್ಧನಾದವನು ಯಾರು ?
   (ರಾಘವಾಂಕ, ಹರಿಹರ, ಲಕ್ಷ್ಮೀಶ, ಮುದ್ದಣ) **(Score : 1)**

3. ತಲೆದೋರು – ಇದು ಯಾವ ಸಂಧಿಗೆ ಉದಾಹರಣೆಯಾಗಿದೆ ?
   (ಲೋಪ, ಆಗಮ, ಆದೇಶ, ಸವರ್ಣದೀರ್ಘ) **(Score : 1)**

4. ಹೊಂದಾವರೆ – ಇಲ್ಲಿರುವ ಸಮಾಸ ಯಾವುದು ?
   (ತತ್ಪುರುಷ, ಕರ್ಮಧಾರಯ, ದ್ವಂದ್ವ, ಕ್ರಿಯಾ) **(Score : 1)**

(5 ರಿಂದ 10 ರ ವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ) **(6 × 1 = 6)**

5. ಸುಖ, ಮುಖ – ಈ ಪದಗಳ ತದ್ಭವ ರೂಪವನ್ನು ಬರೆಯಿರಿ. **(Score : 1)**

6. ಉದಾರ, ಸ್ವತಂತ್ರ – ಈ ಪದಗಳ ಭಾವನಾಮ ರೂಪವನ್ನು ಬರೆಯಿರಿ. **(Score : 1)**

7. ತನಯ, ಹಯ – ಇದರ ಅರ್ಥವನ್ನು ಬರೆಯಿರಿ. **(Score : 1)**

8. ನೋಡು – ಈ ಪದಕ್ಕೆ ಎರಡು ನಿಷೇಧಾರ್ಥ ರೂಪಗಳನ್ನು ಕೊಡಿರಿ. **(Score : 1)**

9. ಆಕಾಶ – ಇದರ ಎರಡು ಪರ್ಯಾಯ ಪದಗಳನ್ನು ಬರೆಯಿರಿ. **(Score : 1)**

10. ಗುಣವಂತ – ಈ ಪದದಲ್ಲಿರುವ ತದ್ಧಿತ ಪ್ರತ್ಯಯವನ್ನು ಗುರುತಿಸಿ ಬರೆಯಿರಿ. **(Score : 1)**

11. ಭಾಷೆಯಲ್ಲಿ ಧ್ವನಿ ವ್ಯತ್ಯಾಸ ಎಂದರೇನು ? ಯಾವುದಾದರೂ ಎರಡು ಉದಾಹರಣೆಗಳಿಂದ ಸ್ಪಷ್ಟಪಡಿಸಿರಿ. **(Scores : 3)**

12. 'ನೀನೆನ್ನಂತರಂಗದೊಳ್ ಗುಪ್ತಳಾಗು' ಈ ಮಾತನ್ನು ಸಂದರ್ಭ ಸಹಿತ ವಿವರಿಸಿರಿ. **(Scores : 3)**

13. ಕೆಳಗಿನ ಪದ್ಯಭಾಗದ ಅಲಂಕಾರವನ್ನು ಗುರುತಿಸಿ, ಲಕ್ಷಣಗಳನ್ನು ಬರೆಯಿರಿ.
    ಗರುಡ ಮಂತ್ರಕೆ ವಿಷವಿಳಿವಂತೆ ಭರತ ಭೂ
    ವರನ ವಾಕ್ಯವ ಕೇಳಲಾಗಿ
    ಜರಜರಿದಂಗಜಗೆತ್ತಿದ್ದ ಕೋಪ ಪೈ
    ಸರಿಸಿತು ಹೃದಯ ತಂಪಾಯ್ತು **(Scores : 3)**

**ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.** **(4 × 4 = 16)**

14. ನಾರದ ಮತ್ತು ಪರ್ವತರ ಸ್ವಾರ್ಥ ಮನೋಭಾವವು ಶ್ರೀಹರಿಗೆ ಲಾಭವಾಗಿ ಪರಿಣಮಿಸಿದ ಸನ್ನಿವೇಶವನ್ನು ಸಂಕ್ಷಿಪ್ತವಾಗಿ ಬರೆಯಿರಿ. **(Scores : 4)**

15. ಇಳೆಯಾಂಡ ಗುಡಿಮಾರನ ಭಕ್ತಿಯನ್ನು ಶಿವನು ಪರೀಕ್ಷೆಗೊಡ್ಡಿದ ಬಗೆಯನ್ನು ತಿಳಿಸಿರಿ. **(Scores : 4)**

16. ಲೇಖಕರು ಸಹ್ಯಾದ್ರಿ ಶ್ರೇಣಿಯ ಚಾರಣದ ಸಂದರ್ಭದಲ್ಲಿ ತಮ್ಮ ಅನುಭವಗಳನ್ನು ಹೇಗೆ ನಿರೂಪಿಸಿದ್ದಾರೆ ? ಸ್ಪಷ್ಟಪಡಿಸಿರಿ. **(Scores : 4)**

17. ನಿಮ್ಮ ತರಗತಿಯ ವತಿಯಿಂದ ವಿಶೇಷ ತಿಂಡಿ ತಿನಿಸುಗಳ ತಯಾರಿಕೆಯ ಕೈಪಿಡಿಯೊಂದನ್ನು ಹೊರತರಲು ಉದ್ದೇಶಿಸಲಾಗಿದೆ. ಆ ಪುಸ್ತಕದಲ್ಲಿ ಸೇರಿಸಲು ಯಾವುದಾದರೂ ಒಂದು ಸಾಂಪ್ರದಾಯಿಕ ತಿಂಡಿಯ ತಯಾರಿಯ ವಿಧಾನವನ್ನು ಬರೆಯಿರಿ. **(Scores : 4)**

18. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಜನೆ ಮಾಡಿ, ಛಂದಸ್ಸನ್ನು ಹೆಸರಿಸಿರಿ.
ದನುಜಂ ಪುಟ್ಟದೆ ಸಂದುದು
ನಿನಗೀ ಪೆಸರೆನ್ನ ಮುಂದೆಯುಂ ಸಂದಪುದೇ **(Scores : 4)**

**ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.** **(5 × 5 = 25)**

19. 'ಗರುಡ ಮಂತ್ರಕೆ ವಿಷವಿಳಿವಂತೆ ಭರತನ ಮಾತುಗಳನ್ನು ಕೇಳಿ ಬಾಹುಬಲಿಯ ಮನಸಿಗಡರಿದ ಕೋಪವು ಇಳಿಯಿತು' ಎಂದು ಕವಿ ವರ್ಣಿಸಿದ್ದಾನೆ. ಹೀಗೆ ಬಾಹುಬಲಿಯ ಕೋಪವು ಇಳಿಯಲು ಕಾರಣವಾದ ಭರತನ ಪ್ರೀತಿಯ ಮಾತುಗಳನ್ನು ವಿವರಿಸಿ ಬರೆಯಿರಿ. **(Scores : 5)**

20. ವಿಧಿ ನಿಯಮವನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಮಾತನ್ನು ಚಂದ್ರಹಾಸನ ಕಥೆಯ ಹಿನ್ನೆಲೆಯಲ್ಲಿ ಸಮರ್ಥಿಸಿ ಬರೆಯಿರಿ. **(Scores : 5)**

21. ಅನುಪಮಾ ನಿರಂಜನರ ಆತ್ಮಕಥೆಯ ಭಾಗವೊಂದನ್ನು ಕೆಳಗೆ ಕೊಡಲಾಗಿದೆ. ಅದನ್ನು ಜೀವನ ಚರಿತ್ರೆಯ ರೂಪಕ್ಕೆ ಪರಿವರ್ತಿಸಿರಿ.
ನನಗೆ ದೇಶ ಸುತ್ತುವ ಹುಚ್ಚು ಜಾಸ್ತಿ. ನಿರಂಜನರು ಚೆನ್ನಾಗಿದ್ದಾಗ ವರ್ಷಕ್ಕೆರಡು ಬಾರಿ ಪ್ರವಾಸ ಹೋಗುತ್ತಿದ್ದೆವು. ಗಂಡ, ಮಕ್ಕಳೊಂದಿಗೆ ಕಳೆದ ಆ ಸಮಯ ಅವಿಸ್ಮರಣೀಯ. ಮುಂಬಯಿ, ಗೋವಾ, ಅಜಂತಾ, ಎಲ್ಲೋರಾ, ಹೈದರಾಬಾದ್, ಮದ್ರಾಸ್, ಮಧುರೈ, ತಿರುವನಂತಪುರ, ಕನ್ಯಾಕುಮಾರಿ ಮುಂತಾದ ಸ್ಥಳಗಳನ್ನು ಆಗ ಸಂದರ್ಶಿಸಿದ್ದೆವು. ಪ್ರವಾಸದಿಂದ ಹಿಂತಿರುಗಿದ ಮೇಲೆ ಅದರ ಬಗ್ಗೆ 'ಕರ್ಮವೀರ' ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದೆ. **(Scores : 5)**

22. ಪ್ರಾಚೀನ ತುಳು ಸಾಹಿತ್ಯದ ವಿಶೇಷತೆಗಳ ಕುರಿತಾದ ಪರಿಚಯಾತ್ಮಕ ಟಿಪ್ಪಣಿಯೊಂದನ್ನು ಸಿದ್ಧಪಡಿಸಿರಿ. **(Scores : 5)**

23. ನಿಮ್ಮ ಊರಿನಲ್ಲಿ 'ಮಂಥರಾ' ನಾಟಕದ ಪ್ರದರ್ಶನ ನಡೆಯಲಿದೆ ಎಂದು ಭಾವಿಸಿಕೊಂಡು ಕಾರ್ಯಕ್ರಮದ ವಿವರಗಳನ್ನೊಳಗೊಂಡಿರುವ ಆಮಂತ್ರಣ ಪತ್ರಿಕೆಯೊಂದನ್ನು ತಯಾರಿಸಿರಿ. **(Scores : 5)**

24.

> "ಕ್ಲಾಸಿಕ್ ಟ್ರಾವಲ್ಸ್"
> ಜಯನಗರ, ಬೆಂಗಳೂರು
> ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸಕ್ಕೆ ವಸತಿ, ಆಹಾರ, ವಾಹನಗಳು ಇತ್ಯಾದಿಗಳನ್ನು ಅತ್ಯಂತ ಕಡಿಮೆ ದರದಲ್ಲಿ ಒದಗಿಸಿ ಕೊಡಲಾಗುವುದು. ಅಗತ್ಯವಿದ್ದಲ್ಲಿ ಸಂಪರ್ಕಿಸಿರಿ.
> ವ್ಯವಸ್ಥಾಪಕರು
> "ನಿಮ್ಮ ಸಮಾಧಾನವೇ ನಮ್ಮ ಧ್ಯೇಯ"

ನಿಮ್ಮ ಶಾಲೆಯಿಂದ 40 ವಿದ್ಯಾರ್ಥಿಗಳನ್ನೊಳಗೊಂಡ ತಂಡ ಬೆಂಗಳೂರಿಗೆ ಪ್ರವಾಸ ಕೈಗೊಳ್ಳಲು ತೀರ್ಮಾನಿಸಲಾಗಿದೆ. ನಿಮಗೆ ಬೇಕಾದ ಆಹಾರ, ವಸತಿ, ವಾಹನಗಳ ವ್ಯವಸ್ಥೆಯನ್ನು ಒದಗಿಸಿ ಕೊಡುವಂತೆ ಆಗ್ರಹಿಸಿ ಮೇಲಿನ ಸಂಸ್ಥೆಯವರಿಗೆ ಮನವಿ ಪತ್ರವೊಂದನ್ನು ಬರೆಯಿರಿ. **(Scores : 5)**

**ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ.** **(2 × 6 = 12)**

25. ಶಿವನಿಂದ ವಿಶೇಷವಾಗಿ ಪ್ರಶಂಸಿಸಲ್ಪಟ್ಟ ಇಳೆಯಾಂಡ ಗುಡಿಮಾರನ ಅತಿಥಿ ಸತ್ಕಾರದ ವೈಖರಿಯನ್ನು ವಿವರಿಸಿರಿ. **(Scores : 6)**

26. 'ಸಲಿಸುವೆಂ ನೂರುವರಂ' ಕಾವ್ಯಭಾಗದಲ್ಲಿ ಮೂಡಿ ಬಂದಿರುವ ಶಿಶುಪಾಲನ ಪಾತ್ರಚಿತ್ರಣವನ್ನು ಮಾಡಿರಿ. **(Scores : 6)**

27. ರೈತರ ಸಮಸ್ಯೆಗಳ ಪ್ರಸ್ತಾಪವನ್ನು 'ಕಾಡಿಗೆ ಹೊದ್ದಿಸಿದ ಮಂಜಿನ ಪರದೆ' ಪಾಠದಲ್ಲಿ ಓದಿರುವಿರಿ. "ರೈತರು ಎದುರಿಸುತ್ತಿರುವ ಸಮಸ್ಯೆಗಳು" ಎಂಬ ವಿಷಯದ ಕುರಿತು ಕೃಷಿ ವಿಭಾಗದಲ್ಲಿ ಪ್ರಕಟಿಸಲು ಪಾಠದ ಮಾಹಿತಿಗಳನ್ನು ಬಳಸಿಕೊಂಡು ಸೂಕ್ತವಾದ ಪ್ರಬಂಧವೊಂದನ್ನು ಸಿದ್ಧಪಡಿಸಿರಿ. **(Scores : 6)**

**ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿರಿ.** **(1 × 8 = 8)**

28. 'ಉಲ್ಲಂಘಿಸುವರುಂಟೆ ವಿಧಿಕೃತವನು' – ಈ ಕಾವ್ಯಭಾಗದ ಕಥೆಯನ್ನು ಸಂಗ್ರಹಿಸಿ ಬರೆಯಿರಿ. **(Scores : 8)**

29. ಭರತನನ್ನು ಯುವರಾಜನನ್ನಾಗಿಸಲು ದಶರಥನಲ್ಲಿ ವರ ಕೇಳುವಂತೆ ಕೈಕೇಯಿಯ ಮನಸ್ಸನ್ನು ಪರಿವರ್ತಿಸಲು ಮಂಥರೆಯು ತೋರಿದ ಉಪಾಯದ ಹಿನ್ನೆಲೆಯಲ್ಲಿ ಮಂಥರೆಯ ಪಾತ್ರ ಚಿತ್ರಣವನ್ನು ಮಾಡಿರಿ. **(Scores : 8)**